OS No.92/2017 PW-**1**

<u>ದಿನಾಂಕ **09.11.2023** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ರಿಂದ **5** ನೇ ಪ್ರತಿವಾದಿಯವರ ಪರ ಶ್ರೀ ಡಿ ಜಿ ವಕೀಲರಿಂದಃ</u>

1 ನೇ ಪ್ರತಿವಾದಿ ನನಗೆ ಮಸೂದ್ ರವರ ಮುಖಾಂತರ ಪರಿಚಯವಾಗಿರುತ್ತಾರೆ. ಮಸೂದ್ ರವರು ಚನ್ನಪಟ್ಟಣ ಟೌನ್ ನಲ್ಲಿ ವಾಸವಾಗಿರುತ್ತಾರೆ. ಮಸೂದ್ ರವರು ನನಗೆ 1 ನೇ ಪ್ರತಿವಾದಿಯವರು ಜಮೀನನ್ನು ಮಾರಾಟ ಮಾಡುತ್ತಾರೆ ನಿಮಗೆ ಬೇಕಾದರೆ ನೀವು ಖರೀದಿ ಮಾಡಿಕೊಳ್ಳಿ ಎಂದು ಹೇಳಿರುತ್ತಾರೆ. ಮಸೂದ್ ರವರ ಜೊತೆಗೆ 1 ನೇ ಪ್ರತಿವಾದಿ ಮತ್ತು ಸಜ್ಜಾದ್ ರವರು ಬಂದಿರುತ್ತಾರೆ. 1 ನೇ ಪ್ರತಿವಾದಿಯವರ ಜೊತೆ ಮೊದಲಿಗೆ ಮಾತನಾಡುವಾಗ ಯಾರು ಬಂದಿರಲಿಲ್ಲ ಆದರೆ ವ್ಯವಹಾರದ ಬಗ್ಗೆ ಮಾತನಾಡುವಾಗ ಅವರ ಮನೆಯಲ್ಲಿಯೇ ಕುಳಿತು ಅವರ ಮನೆಯ ಎಲ್ಲರ ಎದುರು ಮಾತನಾಡಿರುತ್ತೇವೆ. 1 ನೇ ಪ್ರತಿವಾದಿಯವರ ಮನೆಯವರನ್ನು ಹೊರತುಪಡಿಸಿ ಸಜ್ಜಾದ್ ಮತ್ತು ಮಸೂದ್ ರವರು ಹಾಜರಿದ್ದರು. ನನ್ನ ಕಡೆಯಿಂದ ಯಾರು ಬಂದಿರಲಿಲ್ಲ. ಮಸೂದ್ ರವರು ನಾನು ಮತ್ತು 1 ನೇ ಪ್ರತಿವಾದಿಯವರ ನಡುವೆ ಆದಂತಹ ಜಮೀನಿನ ವ್ಯವಹಾರದಲ್ಲಿ ಭಾಗಿಯಾಗಿರುತ್ತಾರೆಂದು ನನ್ನ ನೋಟೀಸ್ ನಲ್ಲಾಗಲೀ ಅಥವಾ ವಾದ ಪತ್ರದಲ್ಲಾಗಲೀ ಅಥವಾ ಸಾಕ್ಷಿಪ್ರಮಾಣ ಪತ್ರದಲ್ಲಾಗಲೀ ನಿರ್ದಿಷ್ಟವಾಗಿ ಹೇಳಿಲ್ಲ. 1 ನೇ ಪ್ರತಿವಾದಿ ಮತ್ತು ಮಸೂದ್ ರವರು ನನ್ನನ್ನು ಜಮೀನಿನ ಬಳಿ ಕರೆದುಕೊಂಡು ಹೋಗಿ ತೋರಿಸಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ದಾಖಲೆಯನ್ನು ಮೂಲ ಪತ್ರ, ವಿಭಾಗ ಪತ್ರ, ಪಹಣಿ ಪತ್ರಿಕೆಯನ್ನು, ನಕ್ಷೆಯನ್ನು ಕೊಟ್ಟಿರುತ್ತಾರೆ ನನಗೆ ಕನ್ನಡ ಅಷ್ಟಾಗಿ ಬಾರದೇ ಇರುವುದರಿಂದ ನಾನು ಪತ್ರ ವ್ಯವಹಾರದ ಬಳಿ ತೋರಿಸಿದೆ ಅವರು ದಾಖಲೆಗಳು ಸಮರ್ಪಕವಾಗಿದೆ ನೀವು

ಖರೀದಿಸಬಹುದು ಎಂದು ಹೇಳಿರುತ್ತಾರೆ ಆನಂತರ ನಾನು ಆಸ್ತಿಯನ್ನು ಖರೀದಿಸಲು ತೀರ್ಮಾನಿಸಿದೆ. ಸದರಿ ದಾಖಲೆಗಳನ್ನು ನನಗೆ ಹಾಜರುಪಡಿಸಲು ತೊಂದರೆ ಇಲ್ಲ ಈ ಹಂತದಲ್ಲಿ ಸಾಕ್ಷಿ ತಾನು ತೆಗೆದುಕೊಂಡು ಬಂದಿದ್ದ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಅವುಗಳು ಜೆರಾಕ್ಸ್ ಪ್ರತಿಗಳಾಗಿರುತ್ತವೆ ಆದ್ದರಿಂದ ನಿಶಾನೆಯಾಗಿ ಗುರುತಿಸಲು ಸಾಧ್ಯವಿಲ್ಲ. ನಾನು ಹಾಜರುಪಡಿಸಿರುವ ಜೆರಾಕ್ಸ್ ಪ್ರತಿಗಳನ್ನು 1 ನೇ ಪ್ರತಿವಾದಿಯವರು ನನಗೆ ಕೊಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ಮಸೂದ್ ರವರಿಗೆ ಕೊಟ್ಟಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಜೆರಾಕ್ಸ್ ಪ್ರತಿಗಳ Certified ಪ್ರತಿಯನ್ನು online ಮುಖಾಂತರ ತೆಗೆದುಕೊಳ್ಳಬಹುದಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿರಲಿಲ್ಲ. 1 ನೇ ಪ್ರತಿವಾದಿ ತಮ್ಮ ಆಸ್ತಿಯನ್ನು ಮಾರಾಟ ಮಾಡಲು ಇಟ್ಟಿರಲಿಲ್ಲ ಆದ್ದರಿಂದ ನಾನು ಸದರಿ ದಾಖಲೆಗಳನ್ನು online ಮುಖಾಂತರ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಬಳಿ 10 ಲಕ್ಷ ರೂಪಾಯಿ ಸಾಲವನ್ನು ಪಡೆದಿದ್ದರು ಎಂದರೆ ಸುಳ್ಳು.

2. ನಾನು ಪ್ರತಿವಾದಿಗೆ ನೀಡಿದ ನೋಟೀಸ್ ನಲ್ಲಿ ಅಂದರೆ ನಿಪಿ-4 ರ ನೋಟೀಸ್ ನಲ್ಲಿ ದಾವಾ ಸ್ವತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಎಂದು ನಮೂದಿಸಿರುತ್ತೇನೆ ಹೌದು ಅದು ಅವರ ಪಿತ್ರಾರ್ಜಿತ ಸ್ವತ್ತೇ ಆಗಿರುತ್ತದೆ ಸದರಿ ಸ್ವತ್ತು ಪಾಲು ಪಾರಿಕತ್ತಿನ ಮುಖಾಂತರ ಬಂದಿರುತ್ತದೆ. ಸರ್ವೆನಂಬರ್ 41/1(ಎ3) ರ ಸ್ವತ್ತು 1 ನೇ ಪ್ರತಿವಾದಿಗೆ ಸೇರಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತಿಗೆ ಸಂಬಂದಪಟ್ಟ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ಸರ್ವೆನಂಬರ್ 41/1(ಎ3) ರ ಸ್ವತ್ತು ರಿ ಸರ್ವೆ ನಂಬರ್ ಆಗಿ 41/1(ಪಿ) ಆಗಿದೆ ಎಂದು ನಿಪಿ-4 ರಲ್ಲಿನಮೂದಿಸಿದ್ದು ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಿಪಿ-4 ರಲ್ಲಿ ಸದರಿ ಕ್ರಯಕ್ಕೆ 1 ನೇ ಪ್ರತಿವಾದಿಯ ಅಣ್ಣನಾದ ಕೋದಂಡರಾಮ, ಅವರ ಧರ್ಮಪತ್ನಿಯಾದ ಕಮಲ ಮತ್ತು ಮಕ್ಕಳಾದ ಚಂದನ್ ಹಾಗೂ ವಿಶ್ವಾಸ್ ರವರ ಒಪ್ಪಿಗೆ ಸಾಕ್ಷಿ ಸಹಿ ಹಾಕಿಸಲಾಗಿದೆ ಎಂದು ನಮೂದಿಸಿದ್ದು ಸದರಿ ಕೋದಂಡರಾಮ,ಕಮಲ, ಚಂದನ್‌ಹಾಗೂ ವಿಶ್ವಾಸ್ ರವರನ್ನು ನಾನು ಭೇಟಿ ಸಹಿ ಹಾಕಿಕೊಡಿ ಎಂದು ಕೇಳಿಲ್ಲ. ನಿಪಿ-1 ರ ಅಗ್ರಿಮೆಂಟ್ ಆದ ದಿನವೂ ಕೂಡ ಈ

ಮೇಲೆ ಹೇಳಿದ ಕೋದಂಡರಾಮ, ಕಮಲ, ಚಂದನ್ ಹಾಗೂ ವಿಶ್ವಾಸ್ ರವರನ್ನು ಕರೆದುಕೊಂಡು ಬಂದು ಸಹಿ ಹಾಕಿಸಿ ಎಂದು 1 ನೇ ಪ್ರತಿವಾದಿಯವರನ್ನು ಕೇಳಿಲ್ಲ.

3. ನಿಪಿ-1 ರ ಅಗ್ರಿಮೆಂಟ್ ಅನ್ನು 1 ನೇ ಪ್ರತಿವಾದಿಯವರೇ ತಯಾರು ಮಾಡಿಸಿರುತ್ತಾರೆ. ನಿಪಿ-1 ರ ಕ್ರಯದ ಕರಾರು ಪತ್ರ ಸರಿಯಾಗಿದೆಯೇ ಎಂದು ನಾನು ಪತ್ರ ಬರಹಗಾರರಾದ ದಿನೇಶ್ ರವರನ್ನು ಕೇಳಿ ಖಚಿತಪಡಿಸಿಕೊಂಡಿರುತ್ತೇನೆ ಪತ್ರ ಬರಹಗಾರರಾದ ದಿನೇಶ್ ರವರನ್ನು ನಾನೇ ಮೊದಲು ಭೇಟಿಯಾಗಿರುತ್ತೇನೆಂದರೆ ಇಲ್ಲ 1 ನೇ ಪ್ರತಿವಾದಿಯವರೇ ಸದರಿ ಬರಹಗಾರರನ್ನು ನೇಮಿಸಿಕೊಂಡಿರುತ್ತಾರೆ. ನನ್ನ ಕನ್ನಡ ಬರುವುದಿಲ್ಲ ಆದ್ದರಿಂದ ಪತ್ರ ಬರಹಗಾರರ ಬಳಿ ಕೇಳಿ ಖಚಿತಪಡಿಸಿಕೊಂಡಿರುತ್ತೇನೆ ಎಂದು ಈ ವಿಚಾರವನ್ನು ನನ್ನ ನೋಟೀಸ್ ನಲ್ಲಾಗಲೀ ಅಥವಾ ವಾದ ಪತ್ರದಲ್ಲಾಗಲೀ ಅಥವಾ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲೀ ಹೇಳಿಲ್ಲ.. ನಿಪಿ-1 ರ ಕ್ರಯದ ಕರಾರು ಪತ್ರ ಆಗುವ ಸಮಯದಲ್ಲಿ1 ನೇ ಪ್ರತಿವಾದಿ ಮತ್ತು ಅವರ ಮನೆಯವರು ಹಾಗೂ ಸಾಕ್ಷಿದಾರರು ಹಾಜರಿದ್ದರು. ಸಾಕ್ಷಿದಾರರನ್ನು 1 ನೇ ಪ್ರತಿವಾದಿಯವರು ಕರೆದುಕೊಂಡು ಬಂದಿರುತ್ತಾರೆ. ಸಾಕ್ಷಿದಾರರ ಹೆಸರುಗಳು ಸಜ್ಜಾದ್ ಮತ್ತು ಮಸೂದ್. ನಮ್ಮ ಕಡೆಯಿಂದ ಯಾವುದೇ ಸಾಕ್ಷಿದಾರರನ್ನು ಕರೆತಂದಿರುವುದಿಲ್ಲ. ದಾವಾ ಸ್ವತ್ತನ್ನು ಖರೀದಿಸಿರುವ ವಿಚಾರವನ್ನು ನಾನು ನನ್ನ ಮನೆಯವರಿಗಾಗಲೀ ಅಥವಾ ಸ್ನೇಹಿತರಿಗಾಗಲೀ ತಿಳಿಸಿರಲಿಲ್ಲ ಅದರೆ ಕರಾರು ಪತ್ರ ಅದ ನಂತರ ನನ್ನ ಮನೆಯವರಿಗೆ ತಿಳಿಸಿರುತ್ತೇನೆ. ನಿಪಿ-1 ರ ಕರಾರು ಪತ್ರಕ್ಕೆ ನನ್ನ ಕಡೆಯಿಂದ ಯಾವುದಾದರೂ ಸಾಕ್ಷಿದಾರರ ಸಹಿಯನ್ನು ಹಾಕಿಸಿಕೊಳ್ಳುವ ಅವಶ್ಯಕತೆ ಇರಲಿಲ್ಲ. ನಾನು 1 ನೇ ಪ್ರತಿವಾದಿಗೆ ಸಾಲವನ್ನು ಮಾತ್ರ ಕೊಟ್ಟಿದ್ದರಿಂದ ನನ್ನ ಕಡೆಯಿಂದ ಯಾವುದೇ ಸಾಕ್ಷಿದಾರರಾಗಿ ನಿಪಿ-1 ರದಾಖಲೆಗೆ ಸಹಿ ಹಾಕಿಲ್ಲ ಎಂದರೆ ಸುಳ್ಳು.? ದಾವಾ ಸರ್ವೆ ನಂಬರ್ ಗೆ ಹೊಂದಿಕೊಂಡಂತೆ ಇರುವ ಇನ್ನು ಉಳಿದ ಜಮೀನಿನಲ್ಲಿ 1 ನೇ ಪ್ರತಿವಾದಿಯವರ ಕೋಳಿ ಪಾರಂ ಇದೆ. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿಯವರು ಕೋಳಿ ಪಾರಂ ಅಲ್ಲದೇ ಒಂದು ಸಣ್ಣ ಮನೆ ಹೊಂದಿರುತ್ತಾರೆ. ಸುತ್ತಲು ಇರುವ ಜಮೀನಿಗೆ ಮುಸುಕಿನ ಜೋಳವನ್ನು ಹಾಕಿಕೊಂಡಿರುತ್ತಾರೆ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.